ಅ) ಮೈಸೂರು ನಗರದ ಕೆ.ಆರ್. ಆಸ್ಪತ್ರೆಯಲ್ಲಿ ದಿನಾಂಕ : 18-11-1998ರಂದು ಮೈಸೂರು ತಾ: ಇಲವಾಲ ಹಳ್ಳಿಯಿಂದ ಚಿಕಿತ್ಸೆಗಾಗಿ ಬಂದ ರೈತಾಪಿ ಗುರುಮಲ್ಲಪ್ಪ ಎಂಬ ರೋಗಿಗೆ (ಗಂಟಲು ನೋವು) ವೈದ್ಯರ ನಿರ್ಲಕ್ಷ್ಯದಿಂದ ಬದಲಿ ಚುಚ್ಚುಮದ್ದು ನೀಡುವುದು ಮೂಲಕ ಆ ರೋಗಿ ಸಾವನ್ನಪ್ಪಿದ ಘಟನೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ವೈದ್ಯರ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು?

ಡಾ: ಎಂ. ಶಂಕರ್ ನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು):—

ಮೈಸೂರು ತಾ: ಇಲವಾಲ ಹೋಬಳಿಯ ಪೆಟ್ಟಿಹಳ್ಳಿ ಗ್ರಾಮದ ಶ್ರೀ ಗುರುಮಲ್ಲಪ್ಪ ಎಂಬ ರೋಗಿಯು ದಿನಾಂಕ: 18-11-98 ರಂದು ಇಎಸ್‌ಟಿ ವಿಭಾಗದ ಸಿ ಘಟಕದಲ್ಲಿ ಕೆ.ಆರ್. ಆಸ್ಪತ್ರೆಯಲ್ಲಿ ದಾಖಲಾಗಿದ್ದು, ಈ ರೋಗಿಗೆ ಅಖಿಲಭಾರತ ವಾಕ್ ಶ್ರವಣ ಸಂಸ್ಥೆಯ ವೈದ್ಯರಾದ ಡಾ: ರತ್ನ ಸಭಾಪತಿ ಇವರ ಇವರ ಪ್ರಿಸ್‌ಕ್ರಿಪಷನ್ ಪ್ರಕಾರ ಔಷಧಿಯನ್ನು ಚುಚ್ಚುಮದ್ದು ನೀಡಿದಾಗ ರೋಗಿ ಪ್ರಜ್ಞಾವಸ್ಥೆಗೆ ಹೋಗಿ ದಿನಾಂಕ: 23-11-98 ರಂದು ಮೈಸೂರಿನ ವರ್ಲ್ಡ್‌ವರ್ತ್ ಆಸ್ಪತ್ರೆಯಲ್ಲಿ ಮರಣ ಹೊಂದಿರುತ್ತಾರೆ.

ಆ) ಈ ರೋಗಿಗೆ ಚುಚ್ಚುಮದ್ದು ನೀಡಿದ ಶುಶ್ರೂಷಕಿಯಾದ ಶ್ರೀಮತಿ ದೇವಮ್ಮ ಇವರನ್ನು ಮೇಲ್ನೋಟಕ್ಕೆ ತಪ್ಪಿತಸ್ಥರೆಂದು ಕಂಡು ಬಂದ ಕಾರಣ ಇವರನ್ನು ಕರ್ತವ್ಯದಿಂದ ನಿಲಂಬನೆಗೊಳಿಸಲಾಗಿದೆ. ಈ ಸಾವಿನ ಬಗ್ಗೆ ವಿಚಾರಣೆ ಮಾಡಲು ಒಂದು ವೈದ್ಯರ ತಂಡವನ್ನು ನೇಮಿಸಲಾಗಿತ್ತು. ಈ ತಂಡದ ವರದಿಯ ಪ್ರಕಾರ (ಪ್ರತಿ ಲಗತ್ತಿಸಿದೆ) ರೋಗಿಯ ವಯೋಧರ್ಮಕ್ಕನುಗುಣವಾಗಿ ನರಗಳ ದೌರ್ಬಲ್ಯ ಹಾಗೂ ಹೃದಯದ ತೊಂದರೆಗಳಿಂದ ಬಳಲುತ್ತಿದ್ದು, ಚುಚ್ಚುಮದ್ದು ನೀಡಿದಾಗ ರಿಯಾಕ್ಷನ್ ಆಗಿರಬಹುದು ಎಂದು ತಿಳಿಸಿರುತ್ತಾರೆ.

ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ವಿವಿಧ ವಾರ್ಡ್‌ಗಳಿಗೆ ನಿಗದಿಪಡಿಸಲಾದ ಹಣ.

39(407) ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ):— ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮೈಸೂರಿನ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ವಿವಿಧ ವಾರ್ಡ್‌ಗಳಲ್ಲಿ ಜನವರಿ 1999 ರ ಹಿಂದೆ ಇದ್ದಂತಹ ಶುಲ್ಕ ಎಷ್ಟು; ಆ ಬಗ್ಗೆ ಜನವರಿಯ ನಂತರ ದಿನವೊಂದಕ್ಕೆ ನಿಗದಿಪಡಿಸಿರುವ ಶುಲ್ಕವೆಷ್ಟು?

ಡಾ: ಎಂ. ಶಂಕರ್ ನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು):—

ಅ) ಕಿ.ಆರ್. ಆಸ್ಪತ್ರೆಯ ವಿವಿಧ ವಾರ್ಡ್‌ಗಳಲ್ಲಿ ಜನವರಿ 99ರ ಹಿಂದೆ ದಿನವೊಂದಕ್ಕೆ ವಿಶೇಷ ಕೊಠಡಿಗಳಿಗೆ ರೂ. 7.50, ರೂ. 15.00 ಮತ್ತು ರೂ. 30-00 ಗಳ ಶುಲ್ಕವಿತ್ತು, ಈ ಶುಲ್ಕವು ಸರ್ಕಾರಿ ಆದೇಶದ ಸಂಖ್ಯೆ ಅಕುಕ 431 ಎಂಎಸ್‌ಎಫ್, 97, ದಿನಾಂಕ 9-9-98 ರಲ್ಲಿ ಪರಿಷ್ಕರಿಸಿ ವಿಶೇಷ ಕೊಠಡಿಗಳಿಗೆ ಕ್ರಮವಾಗಿ ರೂ. 20-00, ರೂ. 40-00 ಮತ್ತು ರೂ. 100-00 ಗಳಂತೆ ದಿನವೊಂದಕ್ಕೆ ನಿಗದಿಪಡಿಸಲಾಗಿದೆ.

ಗ್ರಂಥಾಲಯಗಳ ಸಂಖ್ಯೆ ಹಾಗೂ ಪಾಂಡವಪುರ ಕ್ಷೇತ್ರಕ್ಕೆ ಮಂಜೂರು ಮಾಡಲಾದ ಹೊಸ ಗ್ರಂಥಾಲಯ.

40(90) ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ):— ಮಾನ್ಯ ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿರುವ ಗ್ರಂಥಾಲಯಗಳ ಒಟ್ಟು ಸಂಖ್ಯೆ ಎಷ್ಟು? ಆ ಪೈಕಿ ಎಷ್ಟು ಗ್ರಂಥಾಲಯಗಳು ಕಾರ್ಯ ನಿರ್ವಹಿಸುತ್ತಿವೆ?

ಆ) ಪಾಂಡವಪುರ ಕ್ಷೇತ್ರದಲ್ಲಿ ಎಷ್ಟು ಪಂಚಾಯಿತಿಗಳಲ್ಲಿ ಗ್ರಂಥಾಲಯಗಳು ಇವೆ. 1994ರಿಂದೀಚೆಗೆ ಎಷ್ಟು ಹೊಸ ಗ್ರಂಥಾಲಯಗಳನ್ನು ಮಂಜೂರು ಮಾಡಲಾಗಿದೆ?

ಇ) ಗ್ರಂಥಾಲಯಗಳನ್ನು ಪ್ರಾರಂಭಿಸಲು ಸರ್ಕಾರದವರು ಅನುಸರಿಸುತ್ತಿರುವ ನೀತಿ ನಿಯಮಗಳೇನು?

ಶ್ರೀ ಆರ್. ಕೃಷ್ಣಪ್ಪ (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು):—

ಅ) ಒಟ್ಟು ಸಂಖ್ಯೆ 3124. ಇವುಗಳ ಪೈಕಿ ಒಟ್ಟು 2608 ಗ್ರಂಥಾಲಯಗಳು ಕಾರ್ಯನಿರ್ವಹಿಸುತ್ತಿವೆ.

ಆ) 8 ಪಂಚಾಯಿತಿಗಳಲ್ಲಿ ಗ್ರಂಥಾಲಯಗಳ ವ್ಯವಸ್ಥೆ ಇದೆ. 1994 ರಿಂದೀಚೆಗೆ 3 ಹೊಸ ಗ್ರಂಥಾಲಯಗಳನ್ನು ಮಂಜೂರು ಮಾಡಿದೆ.

ಇ) ಗ್ರಾಮ ಪಂಚಾಯಿತಿಗೊಂದು ಗ್ರಂಥಾಲಯ ಎಂಬ ಯೋಜನೆಯಡಿಯಲ್ಲಿ ಶಾಸಕರು, ಸಂಸದೀಯರು ಹಾಗೂ ಜಿಲ್ಲಾಪಂಚಾಯತ್ ಅಧ್ಯಕ್ಷರ ಶಿಫಾರಸ್ಸಿನ ಮೇರೆಗೆ ಗ್ರಾಮ ಪಂಚಾಯಿತಿ ಗ್ರಂಥಾಲಯಗಳಿಗೆ ಸ್ಥಳ ಆಯ್ಕೆ ಮಾಡಲಾಗಿದೆ ಮತ್ತು ಆರ್ಥಿಕ ಲಭ್ಯತೆಗನುಗುಣವಾಗಿ ಹಂತಹಂತವಾಗಿ ಉಳಿದ ಗ್ರಾಮ ಪಂಚಾಯಿತಿಗಳಿಗೆ ಗ್ರಂಥಾಲಯ ಸೇವೆ ಒದಗಿಸಲಾಗುವುದು.